

ಕಥೆ

# ಇತಿಹಾಸ ಚಕ್ರದ ಎದುರು



**ನಟರಾಜ್ ಹುಳಿಯಾರ್**

ಕಲೆ: ವಿಶ್ವನಾಥ್ ಎ.ಎಸ್.

1

**ತ್ರಿಭುವನ ಮಹಿಪಾಲ** ಮಹಾರಾಜರ ಹದಿನೇಳನೇ ಶತಮಾನದ ಸಾಮ್ರಾಜ್ಯದ ವೈಭವ ಕುರಿತು ರಾವ್ ಬಹದ್ದೂರ್ ದೇಸಾಯಿಯವರು ಬರೆಯಹೊರಟಿದ್ದ ಬೃಹತ್ ಕಾದಂಬರಿಯ ಬಗ್ಗೆ ಓದುಗರಲ್ಲಿ ಮೂಡಿದ್ದ ಸಂಭ್ರಮ, ನಿರೀಕ್ಷೆಗಳು ನಿಮಗೆ ನೆನಪಿರಬಹುದು.

ಅದು 1990ನೆಯ ಇಸವಿ. ರಾವ್ ಬಹದ್ದೂರ್ ದೇಸಾಯಿ ಅದೇ ಆಗ ಸದರಿ ಕಾದಂಬರಿಯ ಬರವಣಿಗೆ ಶುರು ಮಾಡಿದ್ದು ನಾಡಿನಲ್ಲಿ ದೊಡ್ಡ ಸುದ್ದಿಯಾಗಿತ್ತು. ನಾಡು, ನುಡಿ ಸಂಸ್ಕೃತಿಗಳ ಕಟ್ಟಾ ಉಪಾಸಕರಾಗಿದ್ದ ಆಗಿನ ಸರ್ಕಾರದ ಸಂಸ್ಕೃತಿ ಸಚಿವರು ತ್ರಿಭುವನ ಮಹಿಪಾಲರ ಕಾಲದ ಹಳೆಯ ಕೋಟೆಯ ಮೇಲಿದ್ದ ಪ್ರವಾಸಿ ಬಂಗಲೆಯನ್ನು ದುರಸ್ತಿ ಮಾಡಿಸಿ ದೇಸಾಯರ ವಸತಿಗಾಗಿ ಸಜ್ಜುಗೊಳಿಸಿದ್ದರು. ಮೂರು ಸುತ್ತಿನ ಕೋಟೆಗಳ ಒಳಗಿದ್ದ ಹಳೆಯ ಬಂಗಲೆಯೊಳಗೆ ದೇಸಾಯರಿಗಾಗಿ ಕಲರ್ ಟೀವಿ, ಟೆಲಿಫೋನು, ಸೋಫಾ, ಮಂಚಗಳಿಂದ ಹಿಡಿದು ಸಕಲ ಸೌಲಭ್ಯಗಳನ್ನೂ ಸಿರಿ ಡಿಸ್ಟಿಲರೀಸ್ ಕಂಪನಿಯವರು ಸಿದ್ಧ ಮಾಡಿಕೊಟ್ಟಿದ್ದರು. ದೇಸಾಯರು ಕೂತಲ್ಲಿ, ಮಲಗಿದಲ್ಲಿ, ವಾಕ್ ಮಾಡುವ ಹೂದೋಟದಲ್ಲಿ... ಅವರಿಗೆ ಮೂಡು ಬಂದಾಗಲೆಲ್ಲ ಬರೆಯಲು ತಕ್ಕ ಕುರ್ಚಿ, ಒರಗು ದಿಂಬು, ಬೆಂಚು ಕಲ್ಲುಗಳಿದ್ದವು. ಬೇಕೆಂದಾಗ ಮೂಡು ಸೃಷ್ಟಿಸಬಲ್ಲ ಸ್ಕಾಚ್ ವಿಸ್ಕಿಯ ಮೂರು ವಿಶೇಷ ಬ್ರ್ಯಾಂಡುಗಳೂ ಕಪಾಟಿನಲ್ಲಿದ್ದವು.

ನಾಡಿನ ಹೆಮ್ಮೆಯೆಂದೇ ಕರೆಯಲ್ಪಟ್ಟ ದೇಸಾಯರಂಥ ದೊಡ್ಡ ಲೇಖಕರಿಗೆ, ಅದರಲ್ಲೂ ಅವರು ಬರೆಯಹೊರಟಿರುವ ಮಹತ್ವಾಕಾಂಕ್ಷೆಯ ಕೃತಿಗೆ, ಇವೆಲ್ಲ ಅಳಿಲುಸೇವೆ ಮಾತ್ರ ಎಂಬುದು ಸಂಸ್ಕೃತಿ ಸಚಿವರಿಗಷ್ಟೇ ಅಲ್ಲ, ಮುಖ್ಯಮಂತ್ರಿಗಳಿಗೂ ಗೊತ್ತಿತ್ತು. ಜೊತೆಗೆ, ದೇಸಾಯರು ಬರೆಯಲಿರುವ ಕೃತಿಯ ಉಜ್ವಲ ಭಾಷೆ ನಾಡಿನ ಜನರಲ್ಲಿ ತಾಯ್ನೆಲ ಕುರಿತ ಅಭಿಮಾನವನ್ನು ಬಡಿದೆಬ್ಬಿಸುವುದು ಗ್ಯಾರಂಟಿಯಾದ್ದರಿಂದ ಮುಂಬರುವ ಚುನಾವಣೆಯಲ್ಲಿ ಅದರಿಂದ ಅಷ್ಟಿಷ್ಟು ಲಾಭವಾಗಲಿದೆಯೆಂಬ ಸಣ್ಣ ನಿರೀಕ್ಷೆ ಕೂಡ ಇಬ್ಬರೊಳಗೂ ಇತ್ತು.